Papers laid on the Table

Secretary.—I beg to lay on the table of the House a copy of the Karnataka Lokayukta Bill, 1984, as passed by the Legislative Council under Rule 109 of the Rules of Procedure and Conduct of Business in the Karnataka Legislative Assembly.

Mr. Speaker.—Papers laid.

Mr. Speaker.—Calling attention matters. ....

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ಕರ್ನಾಟಕದಲ್ಲಿ ತಮಗೆ ಸಂಪೂರ್ಣವಾಗಿ ಕನ್ನಡಿಗರ ಬೆಂಬಲ ಇದೆ. ಅಲ್ಪಸಂಖ್ಯಾತರು ಕನ್ನಡಿಗರ ಮೇಲೆ ಬಿದ್ದು ನೋವನ್ನುಂಟು ಮಾಡುತ್ತಿದ್ದಾರೆ. ತಾವು ಇದರ ಬಗ್ಗೆ ಯೋಚನೆ ಮಾಡಿ ನೋಡಿ.

Mr. Speaker.—It will not go to record. No discussion under rule 334. ತಾವು ಕುಳಿತುಕೊಳ್ಳಿ. ಬಹಳ ಜನ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿ ತಿಂಗಳಾನುಗಟ್ಟಲೆಯಿಂದ ಕಾಯುತ್ತಿದ್ದಾರೆ. ನಿಮ್ಮ ವಿಷಯ ಒಂದು ಸಾರಿ ಪ್ರಸ್ತಾಪ ಮಾಡಿದ ಮೇಲೆ ಮತ್ತೆ ಪ್ರಸ್ತಾಪ ಮಾಡಲು ಅವಕಾಶ ಇಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಕೆ.ಜಿ.ಎಫ್, ನಲ್ಲಿ ಕನ್ನಡ ಚಿತ್ರವನ್ನು ಹಾಕುವ ಹಾಗೆಯೇ ಇಲ್ಲ. ಅಲ್ಪಸಂಖ್ಯಾತರು ಕನ್ನಡಿಗರಿಗೆ ತೊಂದರೆ ಕೊಡುತ್ತಿದ್ದಾರೆ. ತಾವು ಈ ಬಗ್ಗೆ ಯೋಚನೆ ಮಾಡಬೇಕು.... ...

Mr. Speaker.—It will not go to record.

ಗಮನ ಸೆಳೆಯುವ ಸೂಚನೆ

ವಿಷಯ : ಉತ್ತರ ಕರ್ನಾಟಕ ಭಾಗದಲ್ಲಿ ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪದವೀಧರ ಶಾರೀರಕ ಶಿಕ್ಷಕರಿಗೆ ವೇತನ ಶ್ರೇಣಿಯಲ್ಲಿ ಅನ್ಯಾಯವಾಗಿರುವ ಬಗ್ಗೆ

ಶ್ರೀ ಪಿ. ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕ ಭಾಗದಲ್ಲಿ ಸಹಾಯ ಧನ ಪಡೆಯುತ್ತಾ ಇರತಕ್ಕಂಥ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಪದವೀಧರರ ಶಾರೀರಕ ಶಿಕ್ಷಣ ಶಿಕ್ಷಕರಿಗೆ ವೇತನ ಶ್ರೇಣಿ ಕೊಡುವಾಗ ಬಹಳ ಅನ್ಯಾಯವಾಗಿದೆ ಎನ್ನುವುದರ ಬಗ್ಗೆ ಧಾರವಾಡದ ಡಿ.ಡಿ.ಪಿ.ಐ. ಅವರ ಕಛೇರಿ ಮುಂದೆ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಅವರು ಇದರ ಬಗ್ಗೆ ಅನೇಕ ಮನವಿಗಳನ್ನೂ ಸಹ ಸಲ್ಲಿಸಿದ್ದಾರೆ, 1971ರಲ್ಲಿ ಸರ್ಕಾರ ಈ ಬಗ್ಗೆ ಆಜ್ಞೆ ಹೊರಡಿಸಿದ್ದರೂ ಸಹ ಕೆಲವರಿಗೆ ಕೊಟ್ಟು ಕೆಲವರಿಗೆ ಕೊಡದೇ ಇದ್ದಾರೆ. ಆದುದರಿಂದ ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು).—

ಪ್ರೌಢ ಶಾಲೆಗಳಲ್ಲಿ ಎರಡು ವರ್ಗದ ಶಾರೀರಕ ಶಿಕ್ಷಣ ಶಿಕ್ಷಕರಿದ್ದಾರೆ :—1. ಶಾರೀರಕ ಶಿಕ್ಷಕರು (ಶ್ರೇಣಿ–1) ಮತ್ತು (2) ಶಾರೀರಕ ಶಿಕ್ಷಣ ಶಿಕ್ಷಕರು (ಶ್ರೇಣಿ–2). ಈ ಹುದ್ದೆಗಳ ವೇತನ ಶ್ರೇಣಿ ಮತ್ತು ಈ ಹುದ್ದೆಗಳಿಗೆ ನಿಗದಿ ಪಡಿಸಿರುವ ವಿದ್ಯಾರ್ಹತೆ ಈ ಕೆಳಕಂಡದಂತಿದೆ.—

ಹುದ್ದೆಯ ಪದನಾಮ	ವೇತನ ಶ್ರೇಣಿ	ವಿದ್ಯಾರ್ಹತೆ
	ರೂ.	
ಶಾರೀರಕ ಶಿಕ್ಷಣ ಶಿಕ್ಷಕರು (ಶ್ರೇಣಿ-1)	750–1500	ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದ ಬಿ.ಪಿ.ಎಚ್ (ಶಾರೀರಕ ಶಿಕ್ಷಣದಲ್ಲಿ ಪದವಿ : ಶಾರೀರಕ ಶಿಕ್ಷಣದಲ್ಲಿ ಡಿಪ್ಲೊಮೋ.
ಶಾರೀರಕ ಶಿಕ್ಷಣ ಶಿಕ್ಷಕರು (ಶ್ರೇಣಿ-2)	550–1050	ಎಸ್.ಎಸ್.ಎಲ್.ಸಿ. ಮತ್ತು ಸಿ.ಪಿ.ಎಡ್. (ಶಾರೀರಕ ಶಿಕ್ಷಣದಲ್ಲಿ ಸರ್ಟಿಫಿಕೇಟ್) ಅಥವಾ ತತ್ಸಮ ವಿದ್ಯಾರ್ಹತೆ.

2. ವಿಶೇಷಾಧಿಕಾರಿ (ಶಾಲಾ ಶಿಕ್ಷಣ) ಅವರ ಸಲಹೆಯನ್ನು ಆಧರಿಸಿ ಶಾಲಾ ಶಿಕ್ಷಣದಲ್ಲಿ ಶಾರೀರಕ ಶಿಕ್ಷಣವನ್ನು ಕ್ರಮ ಬದ್ಧಗೊಳಿಸಲು ಸರ್ಕಾರಿ ಆದೇಶ ಕ್ರಮಾಂಕ ಇ.ಡಿ. 64 ಸಿ.ಪಿ.ಇ. 70, ದಿನಾಂಕ 13-4-1971ರಲ್ಲಿ ಕೆಲವು ಆದೇಶಗಳನ್ನು ಹೊರಡಿಸಿದೆ. ಶಾರೀರಕ ಶಿಕ್ಷಣ ಶಿಕ್ಷಕರನ್ನು ನೇಮಕಾತಿ ಮಾಡುವಲ್ಲಿ ಈ ಕೆಳಕಂಡ ನಮೂನೆಯನ್ನು ಸರ್ಕಾರವು ತಾತ್ವಿಕವಾಗಿ ಒಪ್ಪಿಕೊಂಡಿದೆ:—

ವರ್ಗಗಳ ಸಂಖ್ಯೆ (ನಂ. ಆಫ್. ಸೆಕ್ಷನ್ಸ್)	ಪೂರ್ಣಾವಧಿ ಶಿಕ್ಷಕರು	ಅಂಶಕಾಲಿಕ ಶಿಕ್ಷಕರು	ಡಿ.ಪಿ.ಎಡ್. ಬಿ.ಪಿ.ಎಡ್.	ಸಿ.ಪಿ.ಎಡ್.
1–2	....	1	—	1
3–5	1	....	1	....
6–10	2	....	1	1
11–15	3	....	2	1
16–20	4	....	2	2
21–25	5	....	3	2

3. ಮೇಲೆ ನಮೂದಿಸಿದ ದಿನಾಂಕ 13-4-1971ರ ಆದೇಶದಲ್ಲಿ ಅನುದಾನ ಪಡೆಯುತ್ತಿರುವ ಖಾಸಗಿ ಪ್ರೌಢಶಾಲೆಗಳಲ್ಲಿ ಶಾರೀರಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆಯೂ ಆದೇಶವಿದೆ. ಆ ಆದೇಶದ ಪ್ರಕಾರ ಅನುದಾನ ಸಂಹಿತೆ ಅನುಚ್ಛೇದ 4ರಲ್ಲಿ ಇರುವ ನಮೂನೆಯಂತೆ ಶಾರೀರಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡಲು ಹೇಳಿದೆ. ಆದರೆ ಈ ಅನುಚ್ಛೇದದ ಪ್ರಕಾರ 3 ಸೆಕ್ಷನ್ಸ್ ಇರುವ ಶಾಲೆಗೆ ಒಂದು ಪೂರ್ಣಾವಧಿ ಶಾರೀರಿಕ ಶಿಕ್ಷಣ ಶಿಕ್ಷಕರನ್ನು ಕೊಡಲು ಬರುತ್ತದೆ. ಇಂಥಹ ಶಾರೀರಿಕ ಶಿಕ್ಷಣ ಶಿಕ್ಷಕರಿಗೆ ಅವರ ವಿದ್ಯಾರ್ಹತೆಗನುಗುಣವಾಗಿ ಬಿ.ಪಿ.ಎಡ್. ಅಥವಾ ಸಿ.ಪಿ.ಎಡ್. ವೇತನ ಶ್ರೇಣಿ ಕೊಡಬೇಕೆನ್ನುವ ವಿಷಯವಿಲ್ಲ. ಆದಾಗ್ಯೂ ಬೆಳಗಾಂ ವಿಭಾಗದ ಕೆಲವು ಜಿಲ್ಲೆಗಳಲ್ಲಿ ಅನುದಾನ ಪಡೆಯುತ್ತಿರುವ ಖಾಸಗಿ ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಬಿ.ಪಿ.ಎಡ್. ಪದವಿ ಹೊಂದಿರುವ ಶಾರೀರಕ ಶಿಕ್ಷಣ ಶಿಕ್ಷಕರುಗಳಿಗೆ ಶಾರೀರಿಕ ಶಿಕ್ಷಣ ಶಿಕ್ಷಕ ಶ್ರೇಣಿ–1 ವೇತನ ಶ್ರೇಣಿಯನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತೆ. ಬಿ.ಪಿ.ಎಡ್. ಪದವಿ ಹೊಂದಿದ ಮಾತ್ರಕ್ಕೆ ಶಾರೀರಕ ಶಿಕ್ಷಣ ಶಿಕ್ಷಕರಿಗೆ ಉನ್ನತ ವೇತನ ಶ್ರೇಣಿ ಹೊಂದಲು ಸಾಧ್ಯವಿಲ್ಲ.

4. ಈ ಬಗ್ಗೆ ಶಿಕ್ಷಣ ಆಯುಕ್ತರು ಕೆಲವು ಜಿಲ್ಲೆಗಳಲ್ಲಿ ಬಿ.ಪಿ.ಎಡ್. ಆದ ಮಾತ್ರಕ್ಕೆ ಹೇಗೆ ಬಿ.ಪಿ.ಎಡ್. ವೇತನ ಶ್ರೇಣಿಯನ್ನು ಮಂಜೂರು ಮಾಡಿದರು ಎನ್ನುವ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ.

5. ಬೆಳಗಾಂ ವಿಭಾಗದಲ್ಲಿ, ಬಿಜಾಪುರ ಮತ್ತು ಬೆಳಗಾಂನಲ್ಲಿ ಕೆಲವು ಉಪ ನಿರ್ದೇಶಕರು ಬಿ.ಪಿ.ಎಡ್. ಆದ ಶಾರೀರಕ ಶಿಕ್ಷಕರಿಗೆ ಬಿ.ಪಿ.ಎಡ್. ವೇತನ ಶ್ರೇಣಿಯನ್ನು ಕೊಟ್ಟಿರುತ್ತಾರೆ. ಆದರೆ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೊಟ್ಟಿರುವುದಿಲ್ಲ. ಈ ತರಹ ಕೊಟ್ಟಿರುವ ಪೈಕಿ 158 ದೈಹಿಕ ಶಿಕ್ಷಕರು ಇರುತ್ತಾರೆ. ಹಾಲಿ ಅಂಕಿ ಅಂಶಗಳ ಪ್ರಕಾರ 242 ದೈಹಿಕ ಶಿಕ್ಷಣ ಉಪಾಧ್ಯಾಯರು ಬಿ.ಪಿ.ಎಡ್. ಮಾಡಿದವರಿಗೆ ವೇತನ ಶ್ರೇಣಿ ಕೊಟ್ಟಿರುವುದಿಲ್ಲ. ಇವರಿಗೆ ಆ ವೇತನ ಶ್ರೇಣಿ ಕೊಡಬೇಕಾದರೆ ವರ್ಷಕ್ಕೆ ಸುಮಾರು 7,26,000-00 ರೂ. ಹೆಚ್ಚಿನ ವೆಚ್ಚ ಬೀಳುತ್ತದೆ. ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಪ್ರಭಾಕರ್ ರಾಣೆ.—ಸ್ವಾಮಿ, 13-4-1971ರ ಸರ್ಕಾರಿ ಆದೇಶದ ಪ್ರಕಾರ 3 ಮತ್ತು ಮೂರಕ್ಕಿಂಥ ಹೆಚ್ಚು ವರ್ಗಗಳಿರುವಂಥ ಅನುದಾನ ಪಡೆಯುವಂಥ ಶಿಕ್ಷಣ ಸಂಸ್ಥೆಗಳಿಗೆ ಬಿ.ಪಿ.ಎಡ್., ಸಿ.ಪಿ.ಎಡ್. ಆದಂಥ ಶಿಕ್ಷಕರನ್ನು ಕಳುಹಿಸಿದ್ದಾರೆ. ಮೂರು ಸೆಕ್ಷನ್ ಇರುವಂಥ ಶಾಲೆಗಳಲ್ಲಿ ಬಿ.ಪಿ.ಎಡ್., ಸಿ.ಪಿ.ಎಡ್. ಪದವೀಧರ ಶಿಕ್ಷಕರನ್ನು ತೆಗೆದುಕೊಳ್ಳಬೇಕೆಂದು ಅವಕಾಶ ಇದ್ದರೂ ವೇತನ ಶ್ರೇಣಿಯಲ್ಲಿ ತಾರತಮ್ಯ ಮಾಡಿರುವುದು ಏತಕ್ಕೆ? ವೇತನ ಶ್ರೇಣಿ ಒಂದು ಮತ್ತು ಎರಡರ ಪ್ರಕಾರ ಪದವೀ ಮತ್ತು ಡಿಪ್ಲೋಮಾ ಎಂದು ಇದೆ. ಬಿ.ಪಿ.ಎಡ್. ಪದವೀಧರರನ್ನು ನೇಮಕ ಮಾಡಿದಮೇಲೆ ; ಕಡ್ಡಾಯವಾಗಿ ಒಂದನೇ ಶ್ರೇಣಿಯನ್ನು ಕೊಡಬೇಕು. 1971ರ ಆಜ್ಞೆ ಪ್ರಕಾರ 158 ಜನಕ್ಕೆ ಕೊಟ್ಟಿದ್ದಾರೆ. ಆದರೆ, 242 ಜನ ದೈಹಿಕ ಶಿಕ್ಷಕರಿಗೆ ಅದನ್ನು ಕೊಟ್ಟಿಲ್ಲ. 1971ರ ಆದೇಶದ ಪ್ರಕಾರ 1976 ರವರೆಗೆ ಕೊಟ್ಟಿದ್ದಾರೆ. 1976 ನಂತರ ನಿಲ್ಲಿಸಿದ್ದಾರೆ. ಇದರ ವಿಚಾರಣೆ ನಡೆಸುತ್ತಿದ್ದೇವೆಂದು ಹೇಳಿದಿರಿ; ಇದು ಯಾವಾಗ ಮುಗಿಯುತ್ತದೆ? ವಿಚಾರಣೆ ಮುಗಿದ ನಂತರ ತಾರತಮ್ಯ ಹೋಗಲಾಡಿಸುತ್ತೀರಾ?

ಡಾ॥ ಎಂ. ಪಿ. ಕರ್ಕಿ.—ದೈಹಿಕ ಶಿಕ್ಷಕರ ವೇತನ ಶ್ರೇಣಿಯಲ್ಲಿ ಎರಡು ವಿಧ ಇದೆ. ಯಾವ ರೀತಿ ನೇಮಕ ಮಾಡಬೇಕೆಂಬ ವಿಚಾರವೂ ಇದೆ. 3-5 ವರ್ಗಗಳ ಸಂಖ್ಯೆ ಇದ್ದರೆ, ಬಿ.ಪಿ.ಎಡ್. ಪದವೀಧರರನ್ನು ನೇಮಕ ಮಾಡಬೇಕೆಂದು ಆದೇಶ ಕೊಟ್ಟಿದ್ದೀರಿ. ಇದರ ಬಗ್ಗೆ ಮತ್ತೆ ವಿಚಾರಣೆ ಏತಕ್ಕೆ? ತಪ್ಪು ಇದ್ದರೆ ವಿಚಾರಣೆ ಮಾಡಲಿ. ಸರಿಯಾದಂಥ ಕ್ರಮ ಸರ್ಕಾರ ತೆಗೆದುಕೊಂಡಿರುವಾಗ ವಿಚಾರಣೆ ಅಪ್ರಸ್ತುತ. ತಾವು ಬರೀ ದುಡ್ಡಿನ ವಿಷಯದಲ್ಲಿ ಯೋಚನೆ ಮಾಡಬೇಡಿ. ನ್ಯಾಯ ನಿರ್ಣಯ ಮಾಡುವಾಗ, ನ್ಯಾಯವಾದ ರೀತಿಯಲ್ಲಿ ನೇಮಕಾತಿ ಮಾಡಿದ್ದರೆ ; ವೇತನಶ್ರೇಣಿ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ವಿಚಾರಣೆಯನ್ನು ಕೈಬಿಟ್ಟು ತಾವು ನಿರ್ಣಯ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಸ್ವಾಮಿ, ದಾಮಾಶ ಪ್ರಕಾರ ಯಾವ ಯಾವ ಶಾಲೆಗಳಲ್ಲಿ ಬಿ.ಪಿ.ಎಡ್. ಆದವರನ್ನು ಸಿ.ಪಿ.ಎಡ್. ಆದವರನ್ನು ಉಪಾಧ್ಯಾಯರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಮಾಡಲೇಬೇಕು. ಒಂದು ಜಿಲ್ಲೆಗೆ ಕೊಟ್ಟಿದ್ದಾರೆ ; ಇನ್ನು ಎರಡು ಜಿಲ್ಲೆಗೆ ಕೊಟ್ಟಿಲ್ಲ. ದಾಮಾಷಾ ಪ್ರಕಾರ ಯಾರು ಯಾರನ್ನು ನೇಮಿಸಿಕೊಂಡಿದ್ದಾರೆ ; ಅವರಿಗೆ ವೇತನ ಕೊಡಬೇಕೆಂಬುದನ್ನು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಪ್ರಭಾಕರ್ ರಾಣೆ ಎಸ್.—ವಿಚಾರಣೆಯನ್ನು ಏತಕ್ಕೆ ಮಾಡಬೇಕು ಎಂಬುದು ಅರ್ಥವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—1974 ರಿಂದ ಸುಮ್ಮನೇ ಇದ್ದರೂ, ಈಗ ವಿಚಾರಣೆ ಮಾಡಿಸುತ್ತಿದ್ದೇನೆಂದರೆ ಯಾವಾಗ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

ಡಾ। ಎಂ. ಪಿ. ಕರ್ಕಿ.—ಕಳೆದ 9 ವರ್ಷಗಳಿಂದ ವಿಚಾರಣೆ ನಡೆಯುತ್ತಿದೆಯೆ ? ನಿರ್ಣಯ ಯಾವಾಗ ಮಾಡುತ್ತೀರಿ ?

ಉಪಾಧ್ಯಕ್ಷರು.—ಪ್ರಾರಂಭವಾಗಿದೆ.

ಶ್ರೀ ಪ್ರಭಾಕರ್ ರಾಣೆ ಎಸ್.—ನಿರ್ದಿಷ್ಟ ಅವಧಿಯಲ್ಲಿ ಮಾಡುತ್ತೇವೆಂದು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ವಿಚಾರಣೆ ಮುಗಿದ ಕೂಡಲೇ ಕೊಡುತ್ತೇವೆ.

ಉಪಾಧ್ಯಕ್ಷರು.—ಶ್ರೀ ಬಣಕಾರ್ ಗೈರು ಹಾಜರಿ.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ ನಾನು ಹಾಸನ ಡೈರಿ ಬಗ್ಗೆ ಸರ್ಕಾರದ ಗಮನಕ್ಕೆ ತರುವುದೇನೆಂದರೆ.....

ಉಪಾಧ್ಯಕ್ಷರು.—ಇಲ್ಲ ಇಲ್ಲ. ಅದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

(i) The Karnataka Land Revenue (Amendment) Bill, 1984

Motion to consider

Sri V. L. Patil (Minister for Revenue).—I move :

"That the Karnataka Land Revenue (Amendment) Bill, 1984 be taken into consideration"

The question was proposed

ಶ್ರೀ ವಿ. ಎಲ್. ಪಾಟೀಲ್.—ಸ್ವಾಮಿ, ನಗರಗಳು ಹಾಗೂ ಪಟ್ಟಣಗಳು ವಿಪರೀತವಾಗಿ ಬೆಳೆಯುತ್ತಿವೆ ; ಅದೇ ರೀತಿ ಕೈಗಾರಿಕೆಗಳು ಬರುತ್ತಿವೆ ; ಇದರಿಂದ ಹವೆ ಕೆಟ್ಟು, ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುವುದನ್ನು ತಡೆಯುವ ಸಲುವಾಗಿ ನಗರದ ಸುತ್ತಲೂ ಹಸಿರು ಪಟ್ಟಿಯನ್ನು ಮಾಡಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತರಲಾಗಿದೆ ; ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ನಗರಗಳ ಸುತ್ತಲು ಹಸಿರು ಪಟ್ಟಿ ಮಾಡಬೇಕೆಂಬ ಬೇಡಿಕೆ ಬಹಳ ವರ್ಷಗಳಿಂದಲೂ ಇತ್ತು. ನಗರಗಳು ಒರೆ ಕೋರೆಯಾಗಿ ಬೆಳೆಯುವುದರಿಂದ ನಗರದಲ್ಲಿ ವಾಸ ಮಾಡತಕ್ಕ ನಾಗರೀಕರಿಗೆ ನೀರಿನ ಕೊರತೆ ; ವಿದ್ಯುಚ್ಛಕ್ತಿ ಕೊರತೆ, ವಸತಿ ಸೌಕರ್ಯಗಳ ಕೊರತೆ ಹೋಗಲಾಡಿಸುವುದು ಬಹಳ ಕಷ್ಟವಾದ ಕೆಲಸವಾಗಿದೆ. ಆದಷ್ಟು ಬೇಗ ಈ ಮಸೂದೆಯನ್ನು ಕಾರ್ಯರೂಪಕ್ಕೆ ತಂದು ; ಈ ಒಂದು ನಿರ್ದಿಷ್ಟ ಏರಿಯಾದೊಳಗೆ ಮಾತ್ರ ನಗರ ಬೆಳೆಯುವುದಕ್ಕೆ ಅವಕಾಶ ಮಾಡಬೇಕು. ಬೆಂಗಳೂರು ಮತ್ತು ಮಂಗಳೂರು ನಗರಗಳಲ್ಲಿ ದೊಡ್ಡ ಕಟ್ಟಡಗಳು ; ಹೊಸ ಕಟ್ಟಡಗಳು ಬರುವುದನ್ನು ನಿಲ್ಲಿಸಬೇಕು.